ಓ ಎಸ್ ನಂ:398/2019
ಡಿ.ಡಬ್ಲ್ಯೂ -2
ದಿನಾಂಕ: 12.02.2026

<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀಮತಿ ಎಲ್ ಎಂ ಹೆಚ್ ವಕೀಲರಿಂದ:</u>

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಡಿ-3 ರ ಪ್ರಕಾರ ಸರ್ವೇ ನಂ. 24 ರ ಮದ್ಯಭಾಗವನ್ನು ನಾನು ಖರೀದಿ ಮಾಡಿರುತ್ತೇನೆ. ವಾದಿ ಅವರ ತಾಯಿಗೆ ಸರ್ವೇ ನಂ. 24/3 ರಲ್ಲಿ ದಕ್ಷಿಣದ ತಾಕು ದಾನವಾಗಿ ಬಂದಿರುತ್ತದೆ . ನಿಡಿ-13 ರಪ್ರಕಾರ ಗೋವಿಂದಪ್ಪ ರವರಿಂದ ಇಬ್ರಾಹಿಂ ಸಾಬ್ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗೋವಿಂದಪ್ಪ ರಿಂದ ಇಬ್ರಾಹಿಂ ರವರು ದಾವಾ 1 ನೇ ಸ್ವತ್ತನ್ನು ಕೊಂಡುಕೊಂಡಿರುತ್ತಾರೆ ಎಂದರೆ ಸರಿ. ವಾದಿಯ ತಾಯಿಯಿಂದ ಕೊಂಡು ಕೊಂಡಿರುವುದಿಲ್ಲ ಎಂದರೆ ಸರಿ. ವಾದಿಯ ತಾಯಿಗೆ ದಾನವಾಗಿ ಬಂದಿರುವ ಸ್ವತ್ತು ಸದರಿ ಸ್ವತ್ತು ಆಗಿರುವುದಿಲ್ಲ ಎಂದರೆ ಸರಿ. ವಾದಿಯ ತಾಯಿಗೆ ದಾನವಾಗಿ ಬಂದಿರುವ ಸ್ವತ್ತಿಗೂ ಮತ್ತು ನನಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 24/5 ರಲ್ಲಿ 1 ಎಕರೆ ನಾನು ಖರೀದಿಸಿರುತ್ತೇನೆ ಮತ್ತು ಮಾವಿನಹಳ್ಳಪ್ಪ ಇವರಿಂದ ಮತ್ತೆ 1 ಎಕರೆಯನ್ನು ಖರೀದಿ ಮಾಡಿರುತ್ತೇನೆ. ದಾವಾ 2 ನೇ ಸ್ವತ್ತಿಗೂ ನನಗೂ ಸಂಬಂಧ ಇಲ್ಲ ಎಂದರೆ ಸರಿ. ನಿಡಿ-3 ರಲ್ಲಿ ಚಕ್ಕುಬಂದಿ ತಿದ್ದುಪಡಿಯಾಗಿದ್ದು ಅದನ್ನು ಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ದಾವಾ 1 ಮತ್ತು 2 ನೇ ಸ್ವತ್ತಿಗೂನನಗೂ ಯಾವುದೇ ಸಂಬಂಧ ಇರದೇ ಇದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

<u>**ಮರು ವಿಚಾರಣೆ:** ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.